## ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

ಎಸ್.ಸಿ. ಸಂಖ್ಯೆಃ 745/2020

ಚಾ.ಸಾ-9 ಪ್ರಾ.ಸಾ- 2

ದಿಃ 19.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಹೆಚ್.ಜಿ.ರಾಜು |
| ತಂದೆ ಹೆಸರು | ಲೇಟ್ ಗಂಗಯ್ಯ |
| ವಯಸ್ಸು | 65 ವರ್ಷ |
| ವೃತ್ತಿ | ನಿವೃತ್ತ ಎ.ಎಸ್.ಐ |
| ವಿಳಾಸ | ಹುಲಿಯೂರುದುರ್ಗ, ತುಮಕೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2019 ರಿಂದ ನವೆಂಬರ್ 2020 ರವರೆಗೆ ಕೆ.ಪಿ.ಅಗ್ರಹಾರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 16.9.2019 ರಂದು ನಾನು ರಾತ್ರಿ ಪಾಳಿಯಲ್ಲಿ ಎಸ್.ಹೆಚ್.ಒ ಆಗಿದ್ದಾಗ ಮರುದಿನ ದಿಃ 17.9.2019 ರಂದು ಬೆಳಗ್ಗೆ ಚಾ.ಸಾ-1 ರವರು ನನ್ನ ಮುಂದೆ ಹಾಜರಾಗಿ ನಿ.ಪಿ-2 ರಂತೆ ಒಂದು ವರದಿಯನ್ನು ನೀಡಿದ್ದು ಅದರ ಜೊತೆಯಲ್ಲಿ 1 ಮತ್ತು 2 ಆರೋಪಿತರು ಹಾಗು ಮು.ಮಾ-1 ರಿಂದ 6 ಗಳನ್ನು ಹಾಜರುಪಡಿಸಿರುತ್ತಾರೆ. ನಾನು ಸದರಿ ವರದಿಯ ಆಧಾರದ ಮೇಲೆ ನಮ್ಮ ಠಾಣೆ ಗುನ್ನೆ ನಂಃ 150/2019ರಂತೆ ಪ್ರಕರಣವನ್ನು ದಾಖಲಿಸಿಕೊಂಡು

ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಮು.ಮಾ-1 ರಿಂದ ಮು.ಮಾ-6 ಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 104/2019ರಲ್ಲಿ ನೋಂದಾಯಿಸಿ ಕೊಂಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಮುಂದಿನ ತನಿಖೆಗಾಗಿ ನಾನು ಕಡತವನ್ನು ಚಾ.ಸಾ-10 ರವರಿಗೆ ಸಲ್ಲಿಸಿರುತ್ತೇನೆ.

ಪಾಟಿಸವಾಲುಃ ಶ್ರೀಮತಿ ಕೆ.ಕೆ.ಎಲ್., 5ನೇ ಆರೋಪಿ ಪರ ವಕೀಲರಿಂದಃ

6. ನಾನು ಮೇಲೆ ಹೇಳಿದಂತೆ ಸದರಿ ದಿನದಂದು ಫ್ರಾಸಾ-1 ರವರು ನನ್ನ ಮುಂದೆ ನಿ.ಪಿ-2 ರಂತೆ ಯಾವುದೇ ವರದಿ ನೀಡಿರಲಿಲ್ಲ ಮತ್ತು ಆರೋಪಿತರನ್ನು ಹಾಗು ಮು.ಮಾ-1 ರಿಂದ ಮು.ಮಾ- 6 ರಂತೆ ಯಾವುದೇ ವಸ್ತುಗಳನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಉಳಿದ ಆರೋಪಿ ಪರ ವಕೀಲರು ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.